ಹೇಳಬೇಕೆಂದುಕೊಂಡೆನಾದರೂ ಆಗಲಿಲ್ಲ.

ಅವಳ ಗಂಟೇನು ಹೊಕ್ಕತೀ... ಸಾವುಕಾರ ರೊಕ್ಕಾ ಕೊಡ್ತಾರ... ಇಡಿ ಊರ ಮಂದಿಗೆ ಅಡಕೆ ಎಲಿ ಕೊಡ್ತಾಳ ಸಾವ್ಕಾರ್ತಿ ಠಕ್ರವ್ವ...'

ಠಾಕ್ರೀಯನ್ನು ಹಂಗಿಸಿದ ದನಿ ಅಂಗಳದಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸಿನಿಂದ ಕೇಳಿ ಬಂದಿತ್ತು. ಅಲ್ಲಿದ್ದ ಉಳಿದ ಕೆಲಸಗಾರರೂ ನಕ್ಕಿದ್ದರು. ಈ ಮಾತು ಕೇಳಿದ್ದ ನನಗೆ ನಮ್ಮ ಮನೆಯಲ್ಲಿ ಠಾಕ್ರೀಗೆ ವಿಶೇಷ ಆದ್ಯತೆ ಇರುವುದು ಮತ್ತು ಈ ಕಾರಣದಿಂದ ಏನೋ ಸರಿ ಇಲ್ಲದಿರುವುದು ಗೊತ್ತಾಯಿತು. ಆದರೆ ಈ ಸಾಹುಕಾರ ಯಾರಾಗಿರಬಹುದು ಎಂಬುದು ಎಡಬಿಡದೆ ಕಾಡತೊಡಗಿತು. ಠಾಕ್ರೀಗೆ ಚಿಕ್ಕವ್ವಳಷ್ಟೇ ಸುಮಾರು ವಯಸ್ಸು. ಹೀಗಾಗಿ ಕಾಕಾನ ಸಂಗ್ತೀ ಇರಬಹುದೆ ಎಂಬ ಅನುಮಾನ ಮೂಡತೊಡಗಿತು. ಆದರೆ ಮನೆಯ ಯಜಮಾನಿಕೆ ಅಪ್ಪನದಾಗಿದ್ದರಿಂದ ಅವನು ಸಾಹುಕಾರ ಎನಿಸಿದ್ದ. ಈ ಕೆಲಸದ ಹೆಂಗಸರು ನನ್ನನ್ನೂ ಸೇರಿದಂತೆ ಅಜ್ಜನಿಗೂ ಅಪ್ಪನಿಗೂ ಕಾಕಾನಿಗೂ 'ಸಾವಕಾರ' ಅಂತಲೆ ಕರೆಯುತ್ತಿದ್ದರು.

ಯಾರು ನೀವಂದುಕೊಂಡ ಸಾವಕಾರ... ಎಂದು ಕೆಲಸದ ಹೆಂಗಸರನ್ನು ಕೇಳಲು ನನಗಾಗಲಿಲ್ಲ. ಆದರೆ ಅವಳಿಗೆ ರೊಕ್ಕ ಕೊಡುತ್ತಿರುವುದೇಕೆಂಬುದು ಅರ್ಥವಾಯಿತು. ಅದು ನನ್ನ ತಳಮಳಕ್ಕೂ ಕಾರಣವಾಯಿತು.

ಸಣ್ಣ ವಯಸ್ಸಲ್ಲೆ ಠಾಕ್ರೀ ಓಡಿ ಹೋಗಿದ್ದಳು. ಅದ್ಯಾವನೋ ಗೌಂಡಿ, ಅರ್ಧ ಸೇದಿ ಆರಿಸಿದ ಫೈಜ್ ಬೀಡಿಯನ್ನು ಕಿವಿಯ ಮೇಲೆ ಸಿಗಿಸಿಕೊಳ್ಳುವ ಸ್ಟೈಲಿಗೆ ಮಾರುಹೋಗಿದ್ದಳಂತೆ. ಒಂದು ಜುಮ್ಮಾದ ದಿನ ನಸುಕಿನ ವೇಳೆ ಅಲ್ಲಾಭಕ್ಷನೊಂದಿಗೆ ಗೋವಾಕ್ಕೆ ಪರಾರಿಯಾಗಿದ್ದಳು. ಇಬ್ಬರೂ ಸೇರಿ ಮರಳ ದಂಡೆಯಲ್ಲಿ ತಮ್ಮ ಒಂದೊಂದು ಕಾಲು ಇಟ್ಟು ಗುಬ್ಬಿಗೂಡು ಕಟ್ಟಿದರು. ಕಟ್ಟಿದಂತೆ ಅಲೆಗಳು ಕೊಚ್ಚಿಕೊಂಡು ಹೋಗುತ್ತಿದ್ದವು. ಬದುಕು ಒಂದು ಕಣ್ಣು ಮುಚ್ಚಾಲೆ ಆಟ ಎಂಬುದು ಗೊತ್ತಾಗಲು ಬಹಳ ದಿನ ಬೇಕಾಗಲಿಲ್ಲ.

ಫೈಜ್ ಬೀಡಿ ಎಸೆದು ಭಕ್ಷ ಗಾಂಜಾ ಬೆನ್ನಿಗೆ ಬಿದ್ದಿದ್ದ. ಅಲ್ಲಿಗೆ ಬರುತ್ತಿದ್ದ ಹಿಪ್ಪಿಗಳಿಗೆ ಗಾಂಜಾ ಸಪ್ಲೈ ಮಾಡತೊಡಗಿದ. ಬೇಗ ಸಾಹುಕಾರನಾಗುವ ದುರ್ಗಮ ಹಾದಿಯಲ್ಲಿ ಅವನು ಬರಿಗಾಲಲ್ಲಿ ನಡೆಯತೊಡಗಿದ್ದ. ಠಾಕ್ರೀ ಚೆಲುವಿ ಆದರೆ ಪ್ಯಾಲಿ ಹೆಂಗಸು. ಹಿಪ್ಪಿಗಳೊಂದಿಗಿನ ನಂಟು ಅವರನ್ನು ಮನೆಗೂ ಕರೆತಂದಿತು. ಇದು ಇಬ್ಬರಿಗೂ ದೊಡ್ಡಸ್ತಿಕೆಯ ಸಂಗತಿಯಾಗಿತ್ತು. ಬರುಬರುತ್ತ ಪಾರ್ಟಿ ಮನೆಯಲ್ಲೆ ಶುರುವಾದವು. ಫೆನ್ನೀ ವೈನು ಗಾಂಜಾ ಮೀನು ಮಾಂಸ... ವೈಭೋಗ ಯಾವಾಗಲೂ ತೇಲಿಸಿ ಮೇಲೆ ಒಯ್ಯಲು ನೋಡುತ್ತದೆ. ಸ್ವರ್ಗದ ಕಲ್ಪನೆ ತುಸು ಹೊತ್ತಿನಲ್ಲಿ ಕಣ್ಣು ಪೊರೆ ಹರಿದುಕೊಂಡು ನರಕ ದರ್ಶನ ಮಾಡಿಸುತ್ತದೆ. ಇಡಿ ಬದುಕಿಗಾಗುವಷ್ಟು ಕೆಂಡವನ್ನು ಉಡಿಯಲ್ಲಿಟ್ಟುಕೊಂಡು ನಾಳಿನ ರೊಟ್ಟಿ ಬೇಯಿಸಿಕೊಳ್ಳಬೇಕು.

ಠಾಕ್ರೀ ಓಡಿ ಬಂದಂತಹದೆ ಒಂದು ನಸುಕಿನ ಜಾವ. ಕಣ್ಣುಜ್ಜಿ ನೋಡಿದಳು. ಮಗ್ಗಲು ಖಾಲಿ. ಎದ್ದು ಎಲ್ಲ ಕಡೆಗೂ ನೋಡಿದಳು... ಕೂಗಿ ಕರೆದಳು. ಭಕ್ಷ ಇಲ್ಲ. ಹತಾಶೆಯಿಂದ ಗೋಡೆಗೊರಗಿದಳು. ನಿನ್ನೆಯ ಅಮಲು ಇನ್ನೂ ಇಳಿದಿರಲಿಲ್ಲ. ಅವಳ ಕಣ್ಣು ಇನ್ನೂ ತೇಲುತ್ತಿದ್ದವು. ಹಾಗೆ ಕಾಲು ಚಾಚುತ್ತ ತೊಡೆ ಚೆಲ್ಲಿದವಳಿಗೆ... ಭರ್ರನೆ ನಶೆ ಇಳಿದುಹೋಯಿತು. ಒಳತೊಡೆಯಲ್ಲಿ ದಗೆ ಬೇಗೆ. ರಾತ್ರಿ ನಡೆದ ಎಲ್ಲವೂ ಬಿಚ್ಚಿಕೊಳ್ಳತೊಡಗಿದವು. ಹಿಪ್ಪಿಗಳು ಮುಕ್ಕಿ ತಿಂದಿದ್ದರು. ಚೀರಿದಳು... ಅಲೆಯ ಭೋರ್ಗರೆತದಲ್ಲಿ ಅದು ಇಂಗಿ ಹೋಯಿತು. ವಾರ ಕಳೆದರೂ ಭಕ್ಷನ ಸುದ್ದಿ ಇಲ್ಲ. ಅವನು ಬಿಟ್ಟು ಓಡಿಹೋದನೆ... ಪೊಲೀಸರು ರಾತ್ರಿ ಬಂದು ಎಳೆದೊಯ್ದರೆ... ಹಿಪ್ಪಿಗಳು ತುಪಾಕಿ ಸಿಡಿಸಿದರೆ... ಯಾವುದೂ ತಿಳಿಯಲಿಲ್ಲ.

ಕಣ್ಣೆದುರು ಅಗಾಧ ಕಡಲು. ಎಲ್ಲಿಗೊ ಹೋಗುತ್ತಿರುವ ಹಡಗುಗಳು. ಇಲ್ಲಿಗೆ ಮರಳುತ್ತಿರುವ ಮತ್ತೆ ಕೆಲವು ಹಡಗುಗಳು. ಕಿನಾರೆಯ ಉದ್ದಕೂ ನಡೆದಳು. ಅವೆ ಅಲೆಗಳು ಮತ್ತೆ ಮತ್ತೆ ಮರಳಿ ಬರುತ್ತಿವೆ. ಕಡಲಿನ ದುಃಖದ ಮುಂದೆ ತನ್ನದು ಯಾವ ದುಃಖ ಎನಿಸಿತು. ಠಾಕ್ರೀ ಊರಿಗೆ ಮರಳಿದಳು. ಊರು ಮಿಕಿಮಿಕಿ ನೋಡಿತು. ಅವಳ ಅಪ್ಪ ಸಂಬಂಧಿಗಳಲ್ಲೆ ಒಬ್ಬನಿಗೆ ಕೊಟ್ಟು ಮದುವೆ ಮಾಡಿದ. ಹೊಸ ಸೀರೆ ತೊಟ್ಟು ಠಾಕ್ರೀ ಮತ್ತೆ ನವಿಲಾದಳು. ವರ್ಷೊಪ್ಪತ್ತು ಬಾಳುವೆ ಮಾಡಲಾಗದೆ ಗರಿ ಉದುರಿಸಿಕೊಂಡು ಮತ್ತೆ ಊರಿಗೆ ಮರಳಿದ್ದಳು. ಗಂಡ ಬಿಟ್ಟ ಗಯ್ಯಾಳಿ... ಎಂದು